ನಗೆ ಬೀರುತ್ತಾ ಸಿಂಹರಾಜನ ಬಳಿ ಬಂದು ಅತಿಯಾದ ವಿನಯ ತೋರಿಸುತ್ತಾ ತಲೆಯಷ್ಟೇ ಅಲ್ಲದೇ ಮೈಯನ್ನೇ ಬಾಗಿಸಿ ನಾಟಕೀಯವಾಗಿ ನಮಸ್ಕರಿಸಿ 'ಸಿಂಹರಾಜನಿಗೆ ಜಯವಾಗಲಿ! ಅರೇ...! ಇದೇನಿದು ಎಂತಹ ಸುವಾಸನೆ! ತಮ್ಮ ಬಳಿಯಿಂದಲೇ ಬರುತ್ತಿದೆಯಲ್ಲಾ... ಆಹಾ! ಅದ್ಭುತವಾಗಿದೆ' ಎಂದು ಹೊಗಳಲಾರಂಭಿಸಿತು. ಅದರ ಕಪಟತನ ಅರಿತ ಸಿಂಹರಾಜ 'ಎಲವೋ ಕತ್ತೆಕಿರುಬನೇ! ನೀನೆಂತಹ ವೈದ್ಯ? ನಿನ್ನ ವ್ಯಂಗ್ಯ ಅರಿಯದಷ್ಟು ದಡ್ಡನಲ್ಲ ನಾನು... ಬೇಕೆಂದೇ ಹೊಗಳಿದರೆ ನಂಬಲು ನಾನೇನು ಮೂರ್ಖನೇ? ಮಾಡುತ್ತೇನೆ ತಾಳು' ಎಂದದ್ದೇ ಒಂದೇ ಹೊಡೆತಕ್ಕೆ ಅದನ್ನೂ ಸಾಯಿಸಿಬಿಟ್ಟಿತು.

ಸರದಿಯಲ್ಲಿ ನಿಂತು ಇಬ್ಬರು ವೈದ್ಯರ ಪಾಡನ್ನು ಗಮನಿಸುತ್ತಲೇ ಎಚ್ಚೆತ್ತುಕೊಂಡ ಮೂರನೇ ವೈದ್ಯ ನರಿರಾಯ ತಕ್ಷಣ ಮನಸ್ಸಿನಲ್ಲಿ ತಪ್ಪಿಸಿಕೊಳ್ಳುವ ಉಪಾಯ ಹೆಣೆದು ಚೀಲದಲ್ಲಿದ್ದ ಅದ್ಯಾವುದೋ ಗಿಡಮೂಲಿಕೆಯನ್ನು ಯಾರಿಗೂ ಕಾಣದಂತೆ ಮೂಸಿ ರಸವನ್ನು ಕಣ್ಣಿಗೂ ಬಳಿದುಕೊಂಡು ಸಿಂಹರಾಜನನ್ನು ಮೆಲ್ಲನೆ ಸಮೀಪಿಸಿತು. ಅಷ್ಟರಲ್ಲಾಗಲೇ ಕೆಂಪಾದ ಕಣ್ಣು, ಮೂಗಿನಿಂದ ನೀರು ಸುರಿಯತೊಡಗಿತ್ತು. 'ಹೂಂ! ನಿನಗೇನೆನ್ನಿಸುತ್ತೆ ಹೇಳು ನೋಡೋಣ' ಆಜ್ಞಾಪಿಸಿದ ಸಿಂಹರಾಜನಿಗೆ ವಿನೀತನಾಗಿಯೇ ಉತ್ತರಿಸಿತು 'ಛೇ! ತಮಗೆ ಚಿಕಿತ್ಸೆ ಕೊಡುವಂತಹ ಈ ಸಮಯದಲ್ಲಿ ನನಗೆ ಹೀಗಾಗಬೇಕೇ? ದಾರಿಯಲ್ಲಿ ಬರುವಾಗ ಜೋರು ಮಳೆಯಲ್ಲಿ ನೆಂದ ಪರಿಣಾಮ ಮೂಗು ಕಟ್ಟಿದೆ, ಉಸಿರು ಕಟ್ಟಿದಂತಾಗಿ ಬಾಧೆಯಿಂದ ಕಣ್ಣುಗಳೂ ನೀರು ತುಂಬಿಕೊಂಡು ಸರಿಯಾಗಿ ಕಾಣುತ್ತಿಲ್ಲ... ವಾಸನೆಯಂತೂ ತಿಳಿಯುತ್ತಲೇ ಇಲ್ಲ. ಕ್ಷಮೆಯಿರಲಿ ಮಹಾಪ್ರಭು! ತಮಗೆ ನಾನೇನು ಚಿಕಿತ್ಸೆ ಕೊಡಬಲ್ಲೆ?'

ಅದರ ಅವಸ್ಥೆ ನೋಡಿಯೇ ಸಿಂಹರಾಜನಿಗೆ ಮನವರಿಕೆಯಾಗಿತ್ತು ತನಗೆ ಚಿಕಿತ್ಸೆ ಕೊಡುವುದು ನರಿರಾಯನಿಂದ ಸಾಧ್ಯವಿಲ್ಲವೆಂದು. ಥಟ್ಟನೆ ಹೇಳಿತು 'ನಿನ್ನಿಂದ ಯಾವ ಪ್ರಯೋಜನವೂ ಇಲ್ಲ, ಮೇಲಾಗಿ ಅಪಾಯವೇ ಹೆಚ್ಚು! ಮೊದಲು ಇಲ್ಲಿಂದ ತೊಲಗು... ನಿನ್ನ ನೆಗಡಿ ರೋಗವನ್ನು ನನಗೂ ಅಂಟಿಸಬೇಡ... ನಡೆ ಇಲ್ಲಿಂದ!' ಹೊಟ್ಟೆ ಹಿಡಿದುಕೊಂಡು ನರಳುತ್ತಲೇ ಆಜ್ಞಾಪಿಸಿತು. ಬದುಕಿದೆಯಾ ಬಡ ಜೀವವೇ ಎಂದುಕೊಂಡ ನರಿರಾಯ ಅಲ್ಲಿಂದ ಓಟ ಕಿತ್ತಿತು. ಸಮಯ ಪ್ರಜ್ಞೆ ಮತ್ತು ಬುದ್ಧಿವಂತಿಕೆಯಿಂದಾಗಿ ಪ್ರಾಣ ಉಳಿಸಿಕೊಂಡ ವೈದ್ಯ ನರಿರಾಯ, ಬಲಿಷ್ಠ ಮೂರ್ಖರೊಡನೆ ಹೇಗೆ ವರ್ತಿಸಬೇಕೆಂದು ತಿಳಿಯದೇ ಸುಖಾಸುಮ್ಮನೆ ಪ್ರಾಣ ತೆತ್ತ ವೈದ್ಯ ಮಿತ್ರರಾದ ಕರಡಿರಾಯ ಹಾಗೂ ಕತ್ತೆ ಕಿರುಬರಿಗಾಗಿ ಪರಿತಪಿಸುತ್ತಾ ಮುನ್ನಡೆಯಿತು. ■




## ಕುಂಚ ಪ್ರಪಂಚ

**ಸ್ಪರ್ಶಾ ಆರ್.**
8ನೇ ತರಗತಿ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಪವಿತ್ರವನ, ಚಿಕ್ಕಮಗಳೂರು





# ನಾಯಿ ಮರಿ ಬಾ ಬಾ

■ **ರಾಜಶೇಖರ ಕುಕ್ಕುಂದಾ**
ಕಲೆ: ಸಂತೋಷ್ ಸಸಿಹಿತ್ಲು

ನಾಯಿ ಮರಿ ಬಾ ಬಾ
ಜೊಲ್ಲು ಬಿಟ್ಕೊಂಡು
ಕುಂಯ್ಯಂತ ಓಡಿ ಹೋಗು
ಬಾಲ ಎತ್ಕೊಂಡು

ಬೆಕ್ಕಿನ್ಮರಿ ಬಾ ಬಾ
ಪಾತ್ರೆ ಹುಡ್ಕೊಂಡು
ಮ್ಯಾಂವಂತ ಓಡಿ ಹೋಗು
ಹಾಲು ಕುಡ್ಕೊಂಡು

ಗುಬ್ಬಿ ಮರಿ ಬಾ ಬಾ
ಕಾಳು ಕಚ್ಕೊಂಡು
ಪುರ್ರಂತ ಹಾರಿ ಹೋಗು
ಪುಕ್ಕ ಬಿಚ್ಕೊಂಡು

ಕೂಸುಮರಿ ಬಾ ಬಾ
'ಅಮ್ಮಾ' ಅನ್ಕೊಂಡು
ಜಮ್ಮಂತ ನಡೆದು ಹೋಗು
ಮಮ್ಮು ತಿನ್ಕೊಂಡು!